<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 999 |
| ಉತ್ತರಿಸಬೇಕಾದ ದಿನಾಂಕ | : | 25.08.2026 (ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ವರ್ಗಾಯಿಸಿರುವ) |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಆನೇಕಲ್ ತಾಲ್ಲೂಕಿನ ಸೂರ್ಯನಗರ ಬಳಿ ಅಂತರ ರಾಷ್ಟ್ರೀಯ ಕ್ರಿಕೇಟ್ ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಆರಂಭವಾಗಿದೆಯೇ ; ಇದರ ಅಂದಾಜು ಮೊತ್ತ ಎಷ್ಟು ;</td><td>ಆನೇಕಲ್ ತಾಲ್ಲೂಕಿನ ಸೂರ್ಯನಗರ 4 ನೇ ಹಂತದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಂತರಾಷ್ಟ್ರೀಯ ಕ್ರಿಕೇಟ್ ಕ್ರೀಡಾಂಗಣದ ನಿರ್ಮಾಣ ಕಾಮಗಾರಿ ಪ್ರಸ್ತುತ ಪ್ರಾರಂಭವಾಗಿರುವುದಿಲ್ಲ. ಸದರಿ ಕಾಮಗಾರಿಯ ಯೋಜನಾ ಮೊತ್ತ ರೂ.1241.00 ಕೋಟಿಗಳು.</td></tr>
<tr><td>ಆ)</td><td>ಕಾಮಗಾರಿಗೆ ಟೆಂಡರ್ ಕರೆದಿದ್ದು ಯಾವಾಗ ; ಟೆಂಡರ್‌ನಲ್ಲಿ ಎಷ್ಟು ಸಂಸ್ಥೆಗಳು ಭಾಗವಹಿಸಿದ್ದವು ; ಸದರಿ ಸಂಸ್ಥೆಗಳು ಟೆಂಡರ್‌ನಲ್ಲಿ ನಮೂದಿಸಿದ್ದ ಮೊತ್ತ ಎಷ್ಟು ; ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿದೆ ;</td><td>ಕ್ರಿಕೇಟ್ ಸ್ಟೇಡಿಯಂ ಕಾಮಗಾರಿಗೆ ರೂ.943.46 ಕೋಟಿಗಳ ಅಂದಾಜು ಮೊತ್ತಕ್ಕೆ ದಿನಾಂಕ:08.04.2026 ರಂದು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಒಟ್ಟು 2 ಬಿಡ್ದುದಾರರು ಭಾಗವಹಿಸಿರುತ್ತಾರೆ. ವಿವರಗಳು ಕೆಳಕಂಡಂತಿದೆ.
<table>
<tr><th>ಕ್ರ ಸಂ</th><th>ಸಂಸ್ಥೆ ಹೆಸರು</th><th>ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ</th></tr>
<tr><td>1.</td><td>M/s J Kumar Infraprojects Ltd</td><td>ರೂ.1,127.90 ಕೋಟಿಗಳು</td></tr>
<tr><td>2.</td><td>M/s NCC Limited</td><td>ರೂ.1,225.55 ಕೋಟಿಗಳು</td></tr>
</table>
L-1 ಬಿಡ್ದುದಾರರಾದ M/s J Kumar Infraprojects Ltd ರವರಿಗೆ ಸಂಧಾನಿತ ಗುತ್ತಿಗೆ ಮೊತ್ತ ರೂ.990.16 ಕೋಟಿಗಳಿಗೆ ಕಾಮಗಾರಿಯನ್ನು ವಹಿಸಲಾಗಿದೆ.</td></tr>
<tr><td>ಇ)</td><td>ಕ್ರೀಡಾಂಗಣ ನಿರ್ಮಾಣಕ್ಕೆ ರಾಜ್ಯ ಸರ್ಕಾರ ನೀಡಿರುವ ಹಣ ಎಷ್ಟು ; ಅಗತ್ಯವಿರುವ ಬಾಕಿ ಅನುದಾನವನ್ನು ಯಾವ ಮೂಲದಿಂದ ಸಂಗ್ರಹ ಮಾಡಲಾಗುವುದು ;</td><td>ಸದರಿ ಕ್ರೀಡಾಂಗಣ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ. ಕರ್ನಾಟಕ ಗೃಹ ಮಂಡಳಿಯ ಸ್ವತ್ತುಗಳ ವಿಲೇವಾರಿಯಿಂದ ಬರುವ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಸದರಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿದೆ.</td></tr>
<tr><td>ಈ)</td><td>ಕ್ರೀಡಾಂಗಣ ನಿರ್ಮಾಣಕ್ಕೆ ಎಷ್ಟು ಎಕರೆ ಜಮೀನು ಅಗತ್ಯವಿದೆ ; ಅಗತ್ಯ ಜಮೀನು ಸರ್ಕಾರದಲ್ಲಿ ಲಭ್ಯವಿದೆಯೇ; ಎಷ್ಟು ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನಪಡಿಸಿ ಕೊಳ್ಳಲಾಗಿದೆ ; ಈ ಜಮೀನಿಗೆ ನಿಗಧಿಪಡಿಸಿರುವ ದರ ಎಷ್ಟು ?</td><td>ಕ್ರೀಡಾಂಗಣ ನಿರ್ಮಾಣಕ್ಕೆ ಒಟ್ಟು 75-00 (ಎ-ಗು) ಜಮೀನನ್ನು ಕಾಯ್ದಿರಿಸಲಾಗಿದ್ದು, ಈಗಾಗಲೇ ಇಂಡ್ಲವಾಡಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿಕೊಂಡಿರುವ 401-31 (ಎ-ಗು) ಪೈಕಿ 53-14 (ಎ-ಗು) ಜಮೀನನ್ನು ಕ್ರೀಡಾಂಗಣಕ್ಕೆ ಕಾಯ್ದಿರಿಸಲಾಗಿರುತ್ತದೆ.<br><br>ಸದರಿ 53-14 (ಎ-ಗು) ಜಮೀನಿಗೆ ಎಕರೆ ಒಂದಕ್ಕೆ ರೂ.95,52,328/-ಗಳ ಐತೀರ್ಪು ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ ಮತ್ತು ಭೂಮಾಲೀಕರ ಕೋರಿಕೆಯಂತೆ ಸರ್ಕಾರದ ಆದೇಶ ಸಂಖ್ಯೆ:ವಇ 27 ಕಗ್ರಮಂ 2020, ದಿನಾಂಕ :07.09.2020 ರಂತೆ ಶೇ.50:50 ರ ಅನುಪಾತದಡಿಯಲ್ಲಿ ಅಭಿವೃದ್ಧಿಪಡಿಸಿದ ನಿವೇಶನ ಹಾಗೂ ಎಕರೆ ಒಂದಕ್ಕೆ ರೂ.20.00 ಲಕ್ಷದಂತೆ ಮುಂಗಡ ಹಣವನ್ನು ನೀಡಲಾಗುತ್ತಿದೆ.</td></tr>
</table>

| | | |
|---|---|---|
| | | ಹೊಸದಾಗಿ ಇಂಡ್ಲವಾಡಿ ಗ್ರಾಮದಲ್ಲಿ 21-26 (ಎ-ಗು) ಜಮೀನಿಗೆ ಭೂಸ್ವಾಧೀನ ಕಾಯ್ದೆ ಕಲಂ 11(1)ರಂತೆ ಪ್ರಾಥಮಿಕ ಅಧಿಸೂಚನೆಯನು ಹೊರಡಿಸಲಾಗಿದ್ದು, ನಂತರ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲು ಕಲಂ 15(3) ರಡಿ ನಿರ್ದೇಶನ ನೀಡಲಾಗಿರುತ್ತದೆ. ಪ್ರಸ್ತುತ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ:ವಇ 209 ಕಗ್ರಮಂ 2026

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ ಸಚಿವರು